ಆಡಳಿತ ತರಬೇತಿ ಸಂಸ್ಥೆ, ಮೈಸೂರು

# ಮಾಹಿತಿ ಹಕ್ಕು ಅಧಿನಿಯಮ–2005

# ಸರಕಾರೇತರ ಸಂಸ್ಥೆಗಳ ಪಾತ್ರ.

# RIGHT TO INFORMATION ACT-2005

# READING MATERIAL FOR N.G.O'S

**ಮಾಹಿತಿ ಹಕ್ಕು ಅಧಿನಿಯಮ–2005 ಮತ್ತು ಸರಕಾರೇತರ ಸಂಸ್ಥೆ, ಸಮುದಾಯ ಸಂಘಟನೆಗಳ ಪಾತ್ರ.**

ಆಡಳಿತದಲ್ಲಿ ಭಾಗವಹಿಸುವುದು ಯಾವುದೇ ಯಶಸ್ವಿ ಪ್ರಜಾಪ್ರಭುತ್ವದ ಆತ್ಮವಾಗಿದೆ. ನಾಗರೀಕರಾಗಿ ನಾವು ಚುನಾವಣೆ ಸಂಧರ್ಭಗಳಲ್ಲಿ ಮಾತ್ರ ಭಾಗವಹಿಸುವುದೇ, ಪ್ರತಿದಿನದ ಆಧಾರದಲ್ಲಿ ನಡೆಯುವ ನಿರ್ಣಯ, ಕಾನೂನು ಮತ್ತು ಯೋಜನೆಗಳ ತಯಾರಿಗಳಲ್ಲಿ ಮತ್ತು ಚಟುವಟಿಕೆಗಳ ಅನುಷ್ಠಾನಗಳಲ್ಲೂ ಭಾಗವಹಿಸಬೇಕಾಗಿದೆ. ಜನರ ಒಳಗೊಳ್ಳವಿಕೆ ಆಡಳಿತದ ಗುಣಮಟ್ಟವನ್ನು ಮಾತ್ರ ಹೆಚ್ಚಿಸದೇ ಸರಕಾರಿ ಕೆಲಸಗಳಲ್ಲಿ ಪಾರದರ್ಶಕತೆ ಮತ್ತು ಉತ್ತರ ದಾಯಿತ್ವವನ್ನು ಪ್ರೇರೇಪಿಸುತ್ತದೆ. ಆದರೆ ವಾಸ್ತವವಾಗಿ ಜನರು ಆಡಳಿತದಲ್ಲಿ ಹೇಗೆ ಭಾಗವಹಿಸಬಹುದು? ನಿರ್ಣಯಗಳನ್ನು ಹೇಗೆ ತೆಗೆದುಕೊಳ್ಳಲಾಗುತ್ತದೆ ಎಂದು ಜನರು ಹೇಗೆ ತಿಳಿಯಬಹುದು? ಸಾಮಾನ್ಯ ನಾಗರೀಕ ತೆರಿಗೆ ಹಣ ಹೇಗೆ ವ್ಯಯವಾಗುತ್ತದೆ ಮತ್ತು ಸಾರ್ವಜನಿಕ ಯೋಜನೆಗಳು ಸರಿಯಾಗಿ ಚಲಾಯಿಸಲಾಗುತ್ತದೆಯೋ ಅಥವಾ ಸರಕಾರವು ತೀರ್ಮಾನ ತೆಗೆದುಕೊಳ್ಳುವಾಗ ಗೌರವಯುತವಾಗಿ ಮತ್ತು ವಸ್ತುನಿಷ್ಠವಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತಿದೆಯೇ? ಸರಕಾರಿ ನೌಕರರು ತಾವು ಸೇವೆ ಸಲ್ಲಿಸುವಾಗ ಅವರನ್ನು ಉತ್ತರದಾಯಿಯಾಗಿ ಮಾಡಬಹುದೇ?

ಸಾರ್ವಜನಿಕ ಹಣವನ್ನು ವ್ಯಯಿಸುವ ಅಥವಾ ಸಾರ್ವಜನಿಕ ಸೇವೆಯನ್ನು ಪೂರೈಸುವ ಪ್ರಾಧಿಕಾರಗಳಲ್ಲಿರುವ ಮಾಹಿತಿಗಳನ್ನು ಪಡೆಯುವ ಹಕ್ಕನ್ನು ಚಲಾಯಿಸುವುದು ಭಾಗವಹಿಸುವಿಕೆಯ ಒಂದು ದಾರಿಯಾಗಿದೆ. ಮಾಹಿತಿ ಹಕ್ಕು ಅಧಿನಿಯಮ, 2005 ರ ಮೇ ತಿಂಗಳಿನಿಂದ ಕಾರ್ಯಗತಗೊಳಿಸಿರುವುದು. ಭಾರತದ ಎಲ್ಲಾ ನಾಗರೀಕರಿಗೆ ಮಾಹಿತಿ ಹಕ್ಕನ್ನು ನೀಡಿದೆ. ಭಾರತದಂಥ ಪ್ರಜಾಪ್ರಭುತ್ವ ದೇಶದಲ್ಲಿ ಸರಕಾರ ಹೊಂದಿರುವ ಎಲ್ಲಾ ಮಾಹಿತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗಿಸುವುದು ಸರಕಾರ ನಡೆಸುವಿಕೆಯ ಸಾಮಾನ್ಯ ಭಾಗವಾಗಿದೆ. ಏಕೆಂದರೆ ಸಾರ್ವಜನಿಕ ಅಧಿಕಾರಿಗಳು ತಮ್ಮ ಹಣ ಮತ್ತು ಹೆಸರಿನಲ್ಲಿ ಏನು ಮಾಡುತಿದ್ದಾರೆಂದು ತಿಳಿದುಕೊಳ್ಳುವುದು ಜನರಹಿತಕ್ಕಾಗಿ.

1. **ಸಾಮಾಜಿಕ ತಪಾಸಣೆ ಎಂದರೇನು**?

ಸಾರ್ವಜನಿಕ ಪ್ರಾಧಿಕಾರದ ನಿರ್ವಹಣೆಯ ಕಾರ್ಯಕ್ರಮ, ಯೋಜನೆಗಳನ್ನು ಸ್ವತಂತ್ರವಾಗಿ ಮತ್ತು ಜನರ ಭಾಗವಹಿಸುವಿಕೆಯಿಂದ ಪರಿಶೀಲನೆ ಮಾಡುವುದನ್ನು ಸಾಮಾಜಿಕ ತಪಾಸಣೆ ಎನ್ನುತ್ತಾರೆ. ಇದು ಸಾರ್ವಜನಿಕ ಪ್ರಾಧಿಕಾರಗಳ ಕೆಲಸಕಾರ್ಯಗಳನ್ನು ವಿಶ್ಲೇಷಿಸುವ ಮತ್ತು ಕ್ರಮಬದ್ದತೆಯನ್ನು ಒಳಹೊಕ್ಕು ನೋಡುವ, ಸಾಮಾಜಿಕವಾಗಿ ಉತ್ತರದಾಯಿತ್ವವನ್ನು ಪಡೆಯುವ ಅಸ್ತ್ರವಾಗಿದೆಯಲ್ಲದೇ ಸಾಮಾಜಿಕ ಜವಾಬ್ದಾರಿಯನ್ನು ತರುವುದಾಗಿದೆ. ಇದು ಸಾರ್ವಜನಿಕ ಪ್ರಾಧಿಕಾರವನ್ನು ತಾನು ಪರಿಚಯಿಸಿಕೊಂಡ

ಮೌಲ್ಯಗಳಿಗೆ, ಕೆಲಸಗಳಿಗೆ ಬದ್ಧತೆಯನ್ನು ಹೊಂದಿರುವಿಕೆಯನ್ನು ನಾಗರೀಕ ಸಮಾಜವು ಗುರುತಿಸುವುದನ್ನು ಸಾಧ್ಯಮಾಡುತ್ತದೆ. ಇದು ಸಾರ್ವಜನಿಕ ಪ್ರಾಧಿಕಾರಗಳ ಅರ್ಥಿಕೇತರ ಪ್ರಕಾರ್ಯಗಳ ವ್ಯವಸ್ಥಿತ ಮತ್ತು ನಿರಂತರ ಪರಿಣಾಮಗಳ ಮೇಲುಸ್ತುವಾರಿ ಮಾಡಲು ಆದರ ಪಾಲುದಾರರಿಗೆ ಅವಕಾಶ ನೀಡುತ್ತದೆ.

2. ಸಂಪೂರ್ಣ ಪಾರದರ್ಶಕತೆ: ಆಡಳಿತ ತರಬೇತಿ ಪ್ರಕ್ರಿಯೇ ಮತ್ತು ನಿರ್ಣಯ ತೆಗೆದುಕೊಳ್ಳುವಾಗ ತಪಾಸಣೆಯು ಎಲ್ಲಾ ಸಕಾಲಿಕ ಮಾಹಿತಿಗಳನ್ನು ನೀಡುವುದನ್ನು ಸರಕಾರದ ಕರ್ತವ್ಯವಾಗಿಸುತ್ತದೆ.

3. ಹಕ್ಕು ಆಧಾರಿತ ನ್ಯಾಯ: ಸಾಮಾಜಿಕ ತಪಾಸಣೆಯು ಹಕ್ಕು ಆಧಾರಿತ ನ್ಯಾಯವನ್ನು ಭಾದಿತ ವ್ಯಕ್ತಿಗಳು ಮತ್ತು ಅವರ ಪ್ರತಿನಿಧಿಗಳಿಗೆ, ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಮತ್ತು ಮಾವುತೆಯನ್ನು ನೀಡುತ್ತದೆ.

4. ತಿಳಿಸಲ್ಪಟ್ಟ ಅನುಮತಿ:

5. ತಕ್ಷಣದ ಉತ್ತರದಾಯಿತ್ವ: ಸಾಮಾಜಿಕ ತಪಾಸಣೆಯ ಸಂಬಂಧಿತ ವ್ಯಕ್ತಿಗಳಿಗೆ ತನ್ನ ಚುನಾಯಿತ ಪ್ರತಿನಿಧಿಗಳು ಮತ್ತು ಸರಕಾರಿ ಸಿಬ್ಬಂದಿಗಳ ಸಕಾಲಿಕ ಕ್ರಿಯೆ ಮತ್ತು ನಿಷ್ಕ್ರಿಯತೆಯನ್ನು ಕುರಿತು ತಕ್ಷಣ ಮತ್ತು ಸ್ಪಷ್ಟ ಪ್ರತಿಕ್ರಿಯೆಯನ್ನು ಪಡೆಯಲು ಅವಕಾಶ ನೀಡುತ್ತದೆ.

6. ವೇಗವಾದ ನ್ಯಾಯ ಸಲ್ಲಿಕೆ: ಸಾರ್ವಜನಿಕ ಪ್ರಾಧಿಕಾರದಿಂದ ಬಾಧಿತ ಜನರಿಗೆ ನ್ಯಾಯ ಸಲ್ಲಿಸುವಿಕೆಗೆ ಸಾಮಾಜಿಕ ತಪಾಸಣೆ ಅವಕಾಶ ಒದಗಿಸುತ್ತದೆ.

ಮಾಹಿತಿ ಹಕ್ಕು ಕಾಯ್ದೆಯನ್ನು ಬಳಸುವಿಕೆಯಿಂದ ಸರಕಾರೇತರ ಸಂಸ್ಥೆಗಳು ಮತ್ತು ಸಮುದಾಯ ಸಂಘಟನೆಗಳು ಸರಕಾರದ ಪ್ರಕ್ರಿಯೆ ಚಟುವಟಿಕೆ, ಕಾರ್ಯಕ್ರಮಗಳು ಮತ್ತು ಯೋಜನೆಗಳ ಸಾಮಾಜಿಕ ತಪಾಸಣೆಗಳನ್ನು ಆಯೋಜಿಸಬಹುದು. ಮಾಹಿತಿ ಕಾಯ್ದೆಯನ್ನು ಬಳಸುವಿಕೆಯಿಂದ ಸಾರ್ವಜನಿಕ ಪ್ರಾಧಿಕಾರಗಳ ಪ್ರಕ್ರಿಯೆ, ಕಾರ್ಯಕ್ರಮಗಳ ಮತ್ತು ಯೋಜನೆಗಳ ಪರಿಶೀಲನೆಯನ್ನು ಮಾಡುಬಹುದು. ಯಾವುದೇ ಹಂತದಲ್ಲಿ ಸರಕಾರಿ ಇಲಾಖೆಗಳು ನಿರ್ವಹಿಸುತ್ತಿರುವ ಕಾಮಗಾರಿಗಳ ಪರೀಕ್ಷೆ ಮಾಡುವುದಲ್ಲದೇ ಆ ಸಂದರ್ಭದಲ್ಲಿ ಬಳಸುತ್ತಿರುವ ವಸ್ತುಗಳ ಮಾದರಿಯನ್ನು ಪಡೆಯಬಹುದು. ಸರಕಾರೇತರ ಸಂಸ್ಥೆಗಳು ಮತ್ತು ಸಮುದಾಯ ಸಂಘಟನೆಗಳು ಸರಕಾರ ಕೈಗೊಂಡ ನಿಗದಿತ ಕೆಲಸಗಳ ದಾಖಲೆಗಳು, ದಸ್ತಾವೇಜಗಳು ಮತ್ತು ಮಾದರಿಗಳನ್ನು ಸಂಗ್ರಹಿಸುವುದಲ್ಲದೇ ಪರಿಶೀಲಿಸಬಹುದು.

ಈ ಕೆಳಗಿನ ವಿಭಾಗಳು ಮಾಹಿತಿ ಕಾಯ್ದೆಯನ್ನು ಬಳಸುವುದರ ಮೂಲಕ ಮಾಹಿತಿಗಳನ್ನು ಪಡೆದು, ಸಾಮಾಜಿಕ ತಪಾಸಣೆಗಳನ್ನು ನಡೆಸಿ ಆಡಳಿತ ಪ್ರಕ್ರಿಯೆ, ಕಾರ್ಯಕ್ರಮ, ಯೋಜನೆಗಳಲ್ಲಿ

ಪಾರದರ್ಶಕತೆ ತಂದು ಸಾರ್ವಜನಿಕ ಸೇವೆಗಳ ಪೂರೈಕೆಯಲ್ಲಿ ಸುಧಾರಣೆಯಲ್ಲಿದೆ. ಸರಕಾರಿ ಅಧಿಕಾರಿಗಳನ್ನು ಉತ್ತರದಾಯಿಗಳನ್ನಾಗಿ ಹೇಗೆ ಮಾಡಬಹುದೆಂದು ವಿವರಿಸುತ್ತದೆ.

1. ಮಾಹಿತಿಗಳ ಕ್ರೋಢೀಕರಿಸುವುದು, ವಿಶ್ಲೇಷಿಸುವುದು ಮತ್ತು ಶೋಧಿಸುವುದರಿಂದ ನಾಗರೀಕ ಸಮುದಾಯ ಸಂಘಟನೆಗಳು ಅದನ್ನು ಅಧಾರಿಸಿ ಅಂದೋಲನ ನಡೆಸಬಹುದು.

2. ಸರಕಾರೇತರ ಸಂಸ್ಥೆಗಳ ಮತ್ತು ಸಮುದಾಯ ಸಂಘಟನೆಗಳ ಕಾಯ್ದೆಯನ್ನು ಮುಂಚಿನ ದಿನಗಳಲ್ಲೇ ಬಳಸಿ ಬೇಡಿಕೆದಾರರಿಂದ ಉತ್ತಮ ಸೇವೆಗಳ ಕೇಳುವಂತೆ ನಿರ್ದಿಷ್ಟಗೊಳಿಸಬಹುದು. ಮಾಹಿತಿ ಸ್ವಾತಂತ್ರ್ಯದ ಜಗದಲ್ಲೆಡೆಯ ಅನುಭವಗಳಲ್ಲಿ ಗುರುತಿಸಿರುವಂತೆ ಬೇಡಿಕೆ ಮತ್ತು ಪೂರೈಕೆಗಳಲ್ಲಿ ಮುಂಚಿತ ಕೆಲವು ವರ್ಷಗಳು ಪ್ರಮುಖವಾಗಿವೆ. ನಂತರದಲ್ಲಿ ವ್ಯವಸ್ಥೆಗಳು ರಚನೆಗೊಳ್ಳುತ್ತವೆ ಮತ್ತು ನಿಯಮ ಮತ್ತು ಅಭ್ಯಾಸಗಳು ಆಚೆಗೆ ಬರುತ್ತವೆ.

3. ತಿಳಿಯುವಿಕೆ ಹಕ್ಕಿನ ಕಡೆಗೆ ಸರಕಾರವನ್ನು ಪ್ರಚೋದಿಸುವುದು ಅಂದರೆ ಸರಕಾರವೇ ಸ್ವಯಂ ಹೆಚ್ಚಿನ ಮಾಹಿತಿಗಳನ್ನು ಪ್ರಕಟಿಸುವಂತೆ ಪ್ರೋತ್ಸಾಹಿಸುವುದು.

4. ವಿನಾಯಿತಿಗಳು, ವಿಳಂಬ ಪ್ರಕಟಣೆಗಳಲ್ಲಿ ಸಕಾಲಿಕತೆಗಳ ನಿರಂತರ ಪರಿಶೀಲನೆ ನಡೆಸುವುದರಿಂದ ಮಾಹಿತಿ ಹಕ್ಕು ಕಾಯ್ದೆಯು ಸಕಾರಾತ್ಮಕ ದೊರಣೆಯಿಂದ ಪ್ರಾಧಿಕಾರಗಳು ನುಣಚಿಕೊಳ್ಳದಂತೆ ನಿಗಾವಹಿಸುವುದು.

5. ಸರಕಾರದಲ್ಲಿರುವ ಮತ್ತು ಖಾಸಗಿ ಕ್ಷೇತ್ರಗಳಲ್ಲಿರುವ ಸಮಾನ ಸೈಧಾಂತಿಕ ಪಾಲುದಾರರು ಮತ್ತು ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ವಿಶೇಷ ಅನುಭವಗಳನ್ನೊಳವರನ್ನು ಸಮುದಾಯ ಸಂಘಟನೆಗಳನ್ನು ಗುರತಿಸಬೇಕು.

6. ಸಮುದಾಯ ಸಂಘಟನೆಗಳು ಒಟ್ಟಾಗಿ, ಉತ್ತಮವಾಗಿ ಮತ್ತು ಪರಿಣಾಮಕಾರಿಯಾಗಿ ಜನರು ಮಾಹಿತಿ ಹಕ್ಕು ಕಾಯ್ದೆಯನ್ನು ಬಳಸುವಂತೆ ಪ್ರೇರೇಪಿಸಬೇಕು.

ಕಾನೂನು ರಚಿಸುವುದರಲ್ಲಿ ಮತ್ತು ಗೌಪ್ಯತೆಯನ್ನು ಹಳೆಕಾಲದ ಗೋಡೆಗಳನ್ನು ತೂರುವುದಾಗಲಿ ದೊಡ್ಡ ಸವಾಲಲ್ಲ. ಆದರೆ ಬೇರೆ ಬೇರೆ ಸಮುದಾಯಗಳ ಸಾಮಾಜಿಕ ಮತ್ತು ಅರ್ಥಿಕ ಅಭಿವೃದ್ಧಿ ತೀರಾ ಅಗತ್ಯವಾದ ಸರಿಯಾದ ಮಾಹಿತಿಯನ್ನು ಗುರತಿಸುವುದೇ ಸವಾಲು. ದುರ್ಬಲರು ಮತ್ತು ಬಡವರ ಹಿತಾಸಕ್ತಿಗೆ ಅಗತ್ಯವಾದ ಮಾಹಿತಿಗಳನ್ನು, ಹೊಸ ಕಾನೂನು ಬಳಕೆಯಿಂದ ಹೆಕ್ಕಿ ತೆಗೆಯುವಲ್ಲಿ ಸರಕಾರೇತರ ಸಂಸ್ಥೆಗಳು ನಾಗರೀಕ ಸಮುದಾಯ ಸಂಘಟನೆಗಳು ಸೇತುವೆಗಳಾಗಬೇಕು. ಏಕೆಂದರೆ ಮಾಹಿತಿಯನ್ನು ಪಡೆಯುವಲ್ಲಿರುವ ಅಸಮಾನತೆಯು ಅಧಿಕಾರ ಹಂಚಿವಿಕೆಯಲ್ಲಿರುವ ಅಸಮಾನತೆಯನ್ನು ಪ್ರತಿಪಲಿಸುತ್ತದೆ. ಸಮುದಾಯ ಸಂಘಟನೆಯ ಕ್ರಿಯಾತ್ಮಕವಾಗಿದ್ದಲ್ಲಿ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟಕ್ಕೆ ಮಾಹಿತಿ ಕಾಯ್ದೆ ಹಕ್ಕು ಉಪಯೋಗಕಾರಿ ಅಸ್ತ್ರವಾಗುತ್ತದೆ.

ಮಾಹಿತಿ ಹಕ್ಕು ಕಾಯ್ದೆಯ ಅಂಶಗಳ ಅರ್ಥೈಸಿಕೊಳ್ಳವಿಕೆಯಲ್ಲಿ ಸರಕಾರೇತರ ಸಂಸ್ಥೆಗಳು ಮತ್ತು ಸಮುದಾಯ ಸಂಘಟನೆಗಳ ಪಾತ್ರ ಬಹು ಮುಖ್ಯವಾಗಿದೆ. ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಸಂಸ್ಥೆ ಮತ್ತು ಸಮಾಜದ ನಡುವಿನ ಸೇತುವೆಯಾಗಿ ಮಾತ್ರವಲ್ಲದೆ. ಮಾಹಿತಿ ಹಕ್ಕನ್ನು ಕುರಿತು ಸಮುದಾಯದಲ್ಲಿ ಜಾಗೃತಿ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿ ಕಾಯ್ದೆಯಲ್ಲಿ ನೀಡಲಾಗಿರುವ ಸಾರ್ವಜನಿಕ ಸೇವೆಗಳ ಪೂರೈಕೆಯಲ್ಲಿ ಮೇಲುಸ್ತುವಾರಿಯ ಅವಕಾಶವನ್ನು ನಡೆಸುವ ಪಾತ್ರ ಮಾಡಬೇಕು.

**<u>ಮಾಧ್ಯಮದ ಪಾತ್ರ</u>**

ಮಾಹಿತಿಯು ಶಕ್ತಿ ಮಾತ್ರವಲ್ಲದೆ ಪ್ರಜಾಪ್ರಭುತ್ವದ ಪಾರವಾಗಿದೆ. ಜನರು ತಮ್ಮ ಸಮಾಜದಲ್ಲಿ ಏನಾಗುತ್ತದೆ ಎಂದು ತಿಳಿಯದಿದ್ದರೆ, ತಮ್ಮನ್ನಾಳುವ ಜನರ ಕ್ರಿಯೆ ಗುಪ್ತವಾಗಿದ್ದರೆ, ಸಮಾಜದ ಹಿತಾಸಕ್ತಿಗೆ ಅರ್ಥಪೂರ್ಣ ಕೊಡುಗೆ ನೀಡಲಾಗುವುದಿಲ್ಲ. ಅಭಿವ್ಯಕ್ತಿ ಸರಕಾರಗಳ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸ್ಥಿರವಲ್ಲದ ಪ್ರಜಾಪ್ರಭುತ್ವದಲ್ಲಿ ಮತ್ತು ಉತ್ತಮ ಆಡಳಿತದಲ್ಲಿ ಮಾಹಿತಿಯು ತೀರಾ ಅಗತ್ಯವಾಗಿದ್ದು, ಸರಕಾರಿ ಚಟುವಟಿಕೆ ಮತ್ತು ಪ್ರಕ್ರಿಯೆಯಲ್ಲಿ ಭಾಗವಹಿಸಲು ಮಾತ್ರ ಅವಕಾಶ ನೀಡದೇ ಮುಕ್ತತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಆಡಳಿತದಲ್ಲಿ ತರುತ್ತದೆ. "ಮಾಹಿತಿ ಹಕ್ಕು" ಪ್ರತಿ ನಾಗರೀಕನಿಗೆ ಸಾರ್ವಜನಿಕ ಪ್ರಾಧಿಕಾರಗಳು ಹೊಂದಿರುವ ಇಲ್ಲವೇ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಎಲ್ಲಾ ಮಾಹಿತಿಗಳನ್ನು ಪಡೆಯುವ ಹಕ್ಕನ್ನು ನೀಡುತ್ತದೆ. ಹಾಗಾಗಿ ಉತ್ತಮ ಆಡಳಿತ ಪಡೆಯುವ ಮುಖ್ಯ ಅಸ್ತ್ರವಾಗಿದೆ.

ಪಾರದರ್ಶಕತೆಯೆಂದರೆ ನಿರ್ಣಯಗಳು ಮುಕ್ತವಾಗಿ ತೆಗೆದುಕೊಳ್ಳುವುದು ಮತ್ತು ನಿಯಮಾವಳಿ ಮತ್ತು ಆದೇಶಗಳಂತೆಯೇ ಆಚರಣೆಗೆ ತರುವುದಾಗಿರುತ್ತದೆ. ನಿರ್ಣಯ ಮತ್ತು ಅನುಷ್ಠಾನಗಳಿಂದ ಬಾದಿತರಾದವರಿಗೆ ಮಾಹಿತಿಗಳು ಮುಕ್ತವಾಗಿ ಮತ್ತು ನೇರವಾಗಿ ಸಿಗಬೇಕಾಗಿರುವುದು ಇದರ ಅಗತ್ಯ. ಅಂದರೆ ತನ್ನ ಎಲ್ಲಾ ಭಾಗಿದಾರರಿಗೆ ಸಾಕಷ್ಟು ಮಾಹಿತಿಗಳು ಅವನ್ನು ತಿಳಿಯುವ ಮಾದರಿಯಲ್ಲಿ ಸಿಗಬೇಕು, ಮತ್ತು ಮಾದ್ಯಮವು ಅವರನ್ನು ನಿರ್ಣಯಗಳು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುವಂತೆ ಮಾಡಬೇಕು. ಉತ್ತರದಾಯಿತ್ವವೆಂದರೆ ಸಾರ್ವಜನಿಕ ಸಂಸ್ಥೆಗಳು ಮತ್ತು ಅದರ ನೌಕರರು, ಜನರು ಮತ್ತು ಅ ಸಂಸ್ಥೆಯ ಬಾಗಿದಾರರಿಗೆ ಉತ್ತರ ನೀಡುವುದು. ಪಾರದರ್ಶಕತೆಯ ಅರಿವಿಲ್ಲದೆ. ಉತ್ತರದಾಯಿತ್ವ ಒತ್ತಾಯ ಸಾಧ್ಯವಿಲ್ಲ.

ಮಾಹಿತಿ ಹಕ್ಕು ತಿಳುವಳಿಕಸ್ಥ ನಾಗರೀಕ ಮತ್ತು ಉತ್ತಮ ಆಡಳಿತ ನಡುವೆ ನೇರ ಸಂಬಂಧವಿದೆ. ಮಾಹಿತಿ ಕಾಯ್ದೆಯು ನಾಗರೀಕರಿಗೆ, ಸರಕಾರವು ಅವರಿಗಾಗಿ ಏನು ಮಾಡುತ್ತದೆ ಹೇಗೆ ಮತ್ತು ಏಕೆ ಎಂದು ತಿಳಿಯುವ ಅವಕಾಶ ನೀಡುತ್ತದೆ.

ಮಾಹಿತಿ ಹಕ್ಕನ್ನು ಸರಿಯಾದ ಸ್ಫೂರ್ತಿಯಲ್ಲಿ ಅನುಷ್ಠಾನಕ್ಕೆ ತಂದಲ್ಲಿ ಸರಕಾರದಲ್ಲಿ ಜನರ ಭಾಗವಹಿಸುವಿಕೆ, ನಿಯಮಾವಳಿಗಳಿಗೆ ಗೌರವ, ಅಭಿವ್ಯಕ್ತಿ ಸ್ವತಂತ್ರ್ಯ, ಸಹಕಾರ, ಪರಿಣಾಮಕಾರಿ, ಸಾತ್ವಿಕ ಚಿಂತನೆ ಮತ್ತು ಪ್ರಜಾಪೂರ್ವಕ ಸರಕಾರಿ ನ್ಯಾಯಬದ್ದತೆಗಳು ಮುಂತಾದ ಉತ್ತಮ ಆಡಳಿತ ಮೌಲ್ಯಗಳನ್ನು ಆಡಳಿತದಲ್ಲಿ ಕಾಣಬಹುದು. ಆದರಿಂದ ಮಾಹಿತಿ ಹಕ್ಕು ಕಾಯ್ದೆಯ ಉತ್ತಮ ಆಡಳಿತದ ಹೆಗ್ಗುರುತಾಗಿದೆ.

**ಬಡವರು ಮತ್ತು ಇಲ್ಲದ ಜನರು ಬದುಕಿನಲ್ಲಿ ಬದಲಾವಣೆ ತರಲು ಮಾಧ್ಯಮಗಳು ಹೀಗೆ ಮಾಡಬಹುದು.**

- ತಮ್ಮ ಹಕ್ಕು ಮತ್ತು ಅಧಿಕಾರಿಗಳ ಕುರಿತು ಜನರನ್ನು ಹೆಚ್ಚು ಜಾಗೃತರನ್ನಾಗಿ ಮಾಡುವುದು.
- ಸರಕಾರಿ ಕಾರ್ಯಕ್ರಮಗಳು, ಯೋಜನೆಗಳ ಮತ್ತು ಫಲಗಳು ಜನರಿಗೆ ಲಭ್ಯವಾಗಿಸುವುದು.
- ರಾಜಕೀಯ ವಿಷಯಗಳು ಮತ್ತು ಅವಕಾಶ ಮತ್ತು ಚರ್ಚೆ ಉದ್ದೇಶಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ಸಾಮಾಜಿಕ, ಆರ್ಥಿಕ ಮತ್ತು ಪರಿಸರಗಳಂಥ ವಿಷಯಗಳಲ್ಲಿ ಜನರಿಗೆ ಶಿಕ್ಷಣ ನೀಡುವುದು.
- ಸಂಸ್ಥೆಗಳ ಸೋಲಿಗೆ ಕಾರಣವಾಗುವ ಭ್ರಷ್ಟಾಚಾರ, ಮೋಸ, ತ್ಯಾಜ್ಯ, ಅಸಮರ್ಥ್ಯತೆ ಪಕ್ಷಪಾತ, ಜಾತೀಯತೆ ಮತ್ತು ಅಧಿಕಾರ ದುರುಪಯೋಗದಂಥ ವಿಷಯಗಳ ಕುರಿತು ಗಮನಸೆಳೆಯುವುದು.
- ಉತ್ತಮ ಅಭ್ಯಾಸಗಳ ಪರಿಚಯಿಸುವಿಕೆ, ಜ್ಞಾನ ಸಂಪನ್ಮೂಲ ಹೆಚ್ಚಿಸುವಿಕೆ,ಉತ್ತಮ ತಂತ್ರಜ್ಞಾನ ಮತ್ತು ಉತ್ತಮ ಅಯ್ಕೆಗಳನ್ನು ನೀಡುವುದು.
- ಸರಕಾರದ ಸುಧಾರಿತ ನಿರ್ವಹಣೆಗೆ, ಉತ್ತರದಾಯಿತ್ವಕ್ಕೆ, ಉತ್ತಮ ಸೇವೆಗಳ ಪೂರೈಕೆಗೆ ಒತ್ತಾಯಿಸುವುದು.
- ಆಡಳಿತ ಪ್ರಕ್ರಿಯೆಯಲ್ಲಿ ಇತರರೊಡನೆ ಸಂವಾದಕ್ಕೆ ನಿರಂತರ ಅವಕಾಶ(ಸ್ಥಳ) ಒದಗಿಸುವುದು.
- ಅಭಿವೃದ್ಧಿ ಮತ್ತು ಬಡತನ ನಿವಾರಣೆಗೆ ಸಂಬಂಧಿಸಿದಂತೆ ಮಾದ್ಯಮವು ಈ 3 ವಲಯಗಳ ವಿಶೇಷ ಪರಿಣಾಮವನ್ನು ಬೀರಬಹುದು.

**ಸಬಲೀಕರಣ :**

ನಾಗರೀಕರ ಸಬಲೀಕರಣದಲ್ಲಿ ಮಾಧ್ಯಮಕ್ಕೆ ನಿರ್ದಿಷ್ಟ ಪಾತ್ರವಿದೆ. ಇದು ಜನರ ಬೇಡಿಕೆ ಮತ್ತು ಅಶಯಗಳಿಗೆ ಧ್ವನಿ ನೀಡುತ್ತದೆ ಮತ್ತು ಸಕಾಲಿಕ ಮಾಹಿತಿ ಅವರಿಗೆ ಲಭ್ಯವಾಗಿರುತ್ತದೆ. ಯಾವಾಗ ಜನರ ಧ್ವನಿಗಳಿಗೆ ಸಾರ್ವಜನಿಕ ಧ್ವನಿಗೆ ಅವಕಾಶವಿಲ್ಲವೋ ಮತ್ತು ಅವರ ಹಿತಾಸಕ್ತಿಗಳು ಸಕಾರವಾಗಿ ಸಾರ್ವಜನಿಕ ಸಂಧರ್ಭಗಳಲ್ಲಿ ಪ್ರತಿಪಾಲಿಸುವುದಿಲ್ಲವೋ, ಅವರ ಭಾಗವಹಿಸುವ ಶಕ್ತಿಯನ್ನು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ನಗಣ್ಯವಾಗಿಸುತ್ತದೆ. ಮಾಧ್ಯಮ ತನ್ನೆಲ್ಲ ಸಾಧ್ಯ ಅವಕಾಶಗಳಲ್ಲಿ ಇವರ ಶಕ್ತಿಯುತ ಭಾಗವಹಿಸುವಿಕೆಗೆ ಪ್ರಾತಿನಿಧ್ಯ ನೀಡುತ್ತದೆ. ಮಾಹಿತಿಗಳ ಲಭ್ಯತೆ ಮತ್ತು ಮಾಹಿತಿ ತಲುಪಿಸುವಿಕೆ ಪತ್ರಿಕೆ ಮತ್ತು ಚಿತ್ರ ಮಾಧ್ಯಮ ಬೆಳವಣಿಗೆ ಮತ್ತು ಅಂತರಜಾಲದ ಬಳಕೆ ಹೆಚ್ಚಿಸುತ್ತದೆ. ಹಾಗೇ ಆಪಾಯಕಾರಿ ಸ್ಥಿತಿ ಮತ್ತು ಮೂಲೆ ಗುಂಪಾದ ಸಮಾಜದ ವಿಭಾಗಗಳಾದ ಬಡವರು, ಮಹಿಳೆಯರು, ದುರ್ಬಲ ವಿಭಾಗಗಳು ಮತ್ತು ಸಾಮಾಜಿಕವಾಗಿ ವಂಚಿತರು ಮಾಧ್ಯಮಗಳನ್ನು ಬಳಸುವುದರಿಂದ ಅವರ ಧ್ವನಿಗಳನ್ನು ಕೇಳುವಂತೆ ಮಾಡಬಹುದು.

7. ಸಾಮಾಜಿಕ ಜಾಗೃತಿ ಮತ್ತು ಕ್ರಿಯೆ: ಮಾಧ್ಯಮವು ಸ್ವಾತಂತ್ರವನ್ನು ಕಾಪಾಡುವುದು, ಮಾತ್ರವಲ್ಲದೆ ಅದನ್ನು ಇತರರಿಗೆ ಹಂಚುವುದರಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಸುದ್ದಿ ಮಾಧ್ಯಮವು ಸಾಮಾಜಿಕ ಸಮಸ್ಯೆಗಳನ್ನು ಜನರ ಅವಗಾಹನೆಗೆ ತಲುಪಿಸಲು ಅಗತ್ಯ ಅವಕಾಶವನ್ನು ನೀಡುವುದರಿಂದ ಪ್ರಮುಖ ಪಾತ್ರವನ್ನು ಮಾಡುತ್ತದೆ.
8. ಸಾರ್ವಜನಿಕ ಮಾತುಕತೆಗೆ ನಾಗರೀಕರನ್ನು ಬಲಗೊಳಿಸುವ ಪ್ರಕ್ರಿಯೆಯಲ್ಲಿ, ಜನರ ಮನಸ್ಥಿತಿ ಚಿಂತನೆ ಮತ್ತು ತುಡಿತಗಳ ನಿರ್ಮಾಣದಲ್ಲಿ ಮಾಧ್ಯಮ ರಚನಾತ್ಮಕ ಹೊಂದಿರುತ್ತದೆ. ಬಡವರಿಗೆ ಧ್ವನಿ ಕೊಡುವುದರ ಜೊತೆಯಲ್ಲಿ ತನ್ನ ಸಮಸ್ಯೆಗಳಿಂದ ಆಚೆಗೆ ಬರಲು ಅಗತ್ಯವಾದ ಪ್ರಾಥಮಿಕ ಅವಕಾಶಗಳನ್ನು ಒದಗಿಸುತ್ತದೆ. ಸಾರ್ವಜನಿಕ ಜಾಗೃತಿಯನ್ನು ರೂಪಿಸುವುದು ಮತ್ತು ಅದರ ಚಲಾವಣೆ ಮೂಲಕ ಮಾಧ್ಯಮವು ಸುಸ್ಥಿರ ಅಭಿವೃದ್ದಿ ಮತ್ತು ಬಡತನ ನಿವಾರಣೆಯಲ್ಲಿ ಪ್ರಮುಖ ಅಂಶವಾಗಿ ಸಹಕರಿಸುತ್ತದೆ.
9. ಉತ್ತಮ ಆಡಳಿತ: ಉತ್ತಮ ಆಡಳಿತವು ಬಡತನ ನಿವಾರಣೆಗೆ ಅಗತ್ಯವಾಗಿದೆ. ಉತ್ತಮ ಆಡಳಿತಕ್ಕೆ ಮುಕ್ತ ಮಾಧ್ಯಮವು ತೀರಾ ಅವಶ್ಯವಾಗಿದೆ. ಮಾಹಿತಿಯು ಸ್ಥಳೀಯ ಸಂಸ್ಥೆ, ಸಾರ್ವಜನಿಕ ಪ್ರಾಧಿಕಾರ ಮತ್ತು ಜನರ ನಡುವೆ ಹರಿಯಲು ಮಾಧ್ಯಮ ಅಗತ್ಯವಾಗಿದೆ. ಸರಕಾರದ ಕೆಟ್ಟ ನಡವಳಿಕೆಗೆ ವಿರೋಧವಾಗಿ, ಕಾವಲು ಪಡೆಯಾಗುವುದಲ್ಲದೆ. ಅವುಗಳನ್ನು ಪಾರದರ್ಶಕತೆ ಮತ್ತು

ಉತ್ತರದಾಯಿತ್ವಕ್ಕೆ ಬದ್ದ ಮಾಡುವುದು. ಸಾರ್ವಜನಿಕ ಸೇವೆಗಳ ಪೂರೈಕೆಯನ್ನು ಮೇಲುಸ್ತುವಾರಿ ಮಾಡುವುದು ಜನರಿಗೆ ಅಗತ್ಯವಾದ ಗುರುತರ ವಿಷಯಗಳ ಕುರಿತು ಸೋಲುಗಳನ್ನು ಗುರುತಿಸುವುದಲ್ಲದೆ, ಉತ್ತಮ ಆಡಳಿತಕ್ಕೆ ಬೆಂಬಲಿಸುವುದನ್ನು ಮಾಡಬಹುದು.

ಉದಾ:

- ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ವೇಗ ವರ್ಧಕವಾಗುವುದು.
- ಕಾಯ್ದೆಯ ಕುರಿತು ಮಾಹಿತಿಯನ್ನು ಜನರಿಗೆ ನೀಡುವುದು ಮತ್ತು ಜಾಗೃತಿ ಮೂಡಿಸುವುದು.
- ಜನರಿಗೆ ಧ್ವನಿ ನೀಡುವುದು.
- ಜನರ ಪರವಾಗಿ ಕಾವಲು ಕಾಯುವುದು.
- ಸಾಮಾಜಿಕ ತಪಾಸಣೆಗಳ ವರದಿ ಮಾಡುವುದು.

**ಈ ಕೆಳಗಿನವು ಮಾದ್ಯಮಗಳು ಮಾಹಿತಿ ಹಕ್ಕು ಕಾಯ್ದೆಯ ಬಳಕೆಯಿಂದ ಮಾಡಬಹುದಾದ ಪಾತ್ರಗಳು.**

- ಮಾಹಿತಿ ಅನುಷ್ಠಾನದ ಮೇಲ್ವಿಚಾರಣೆ
- ಸಾರ್ವಜನಿಕ ಸೇವಾ ಪೂರೈಕೆಯಲ್ಲಿ ಪರಿಣಾಮಕಾರಿತ್ವ ಮತ್ತು ಸಾಮರ್ಥ್ಯ ಕುರಿತು ವರದಿ ಮಾಡುವುದು,
- ಭ್ರಷ್ಟಾಚಾರ ಮತ್ತು ವಂಚನೆಗಳ ಬಯಲು ಮಾಡುವುದು.
- ಸಾರ್ವಜನಿಕ ಹಿತಾಸಕ್ತಿಗೆ ಪ್ರಾಮುಖ್ಯತೆ ನೀಡುವುದು.
- ಕಾಯ್ದೆಯ ಬಳಕೆಯಲ್ಲಿ ಸಂಘಟನೆ ವ್ಯಕ್ತಿಗಳ ವಿಶಿಷ್ಟ ಸಾಧನೆಗಳ ಪ್ರಕಟಣೆ.

ಈ ಕೆಳಗಿನವುಗಳು ಕೆಲವು ಅಯ್ದ ಸಾರ್ವಜನಿಕ ಸೇವಾ ಸಂಸ್ಥೆಗಳು ಮಾಧ್ಯಮ ಮತ್ತು ಸಂಘ ಸಂಸ್ಥೆಗಳ ಉಪಯೋಗಕ್ಕಾಗಿ ಪಟ್ಟಿ ಮಾಡಲಾಗಿದೆ.

**ಪ್ರಾರ್ಥಮಿಕ ಆರೋಗ್ಯ ಸೇವೆಗಳು (ವಿಭಾಗ 8(1) ರಲ್ಲಿ ವಿನಾಯಿತಿ ಹೊಂದಿದೆ ಯಾವುದಾದರು ಈ ಮಾಹಿತಿಗಳನ್ನು ಪಡೆಯಬಹುದು.**

- **ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ಹಾಜರಾತಿ**
- **ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳ ಕ್ಷೇತ್ರ ಭೇಟಿ.**
- **ಇತರೆ ಆರೋಗ್ಯಧಿಕಾರಿಗಳು ಮೇಲುಸ್ತುವಾರಿಗಾಗಿ ತೆಗೆದುಕೊಂಡ ಭೇಟಿಗಳು,**
- **ಔಷಧಿಗಳ ದಾಸ್ತಾನು ನೊಂದಣಿ ಪುಸ್ತಕ ಔಷಧಿಗಳ ಸರಬರಾಜಿನ ದಿನಾಂಕ ಮತ್ತು ಎಕ್ಸ್‌ಪೈರಿ ದಿನಾಂಕಗಳು.**
- **ಹೊರರೋಗಿಗಳ ತಪಾಸಣೆ ಸಂಖ್ಯೆ**
- **ಕೇಂದ್ರದಲ್ಲಿರುವ ರಕ್ಷಕ ಗುಂಡಿಗಳ ನಿರ್ವಹಣೆ**

- ನಿರ್ವಹಿಸಿದ ಶಸ್ತ್ರ ಚಿಕಿತ್ಸಗಳ ಸಂಖ್ಯೆ ಮತ್ತು ಯಶಸ್ಸಿನ ದರ
- ಕ್ರಿಯಾ ಯೋಜನೆಯ ಪ್ರಕಾರ ಚುಚ್ಚು ಮದ್ದು ನೀಡಿಕೆ ಪ್ರಮಾಣ
- ರೆಫ್ರಿಜರೇಟರ್‌ನಲ್ಲಿರುವ ಮದ್ದುಗಳ ಪರಿಶೀಲನೆ
- ನಿತ್ಯದ ವೈದ್ಯಕೀಯ ಪರೀಕ್ಷೆಯಲ್ಲಿ ತೆಗೆದುಕೊಳ್ಳುತ್ತಿರುವ ಭದ್ರತೆ ಮಾನದಂಡಗಳ ಪರಿಶೀಲನೆ.
- ಚುಚ್ಚುಮದ್ದು ನೀಡುವಿಕೆ, ಚೀಟಿಗಳ ನಿರ್ವಹಣೆ
- ಸಕಾಲಿಕ ಇತರೆ ನೊಂದಣಿ ಪುಸ್ತಕಗಳ ಪರಿಶೀಲನೆ.
- ನಾಗರೀಕರಿಗಾಗಿ ಮಾಹಿತಿ ಫಲಕದ ಅನುಷ್ಠಾನ

ಪ್ರಾರ್ಥಮಿಕ ಶಿಕ್ಷಣ: (ವಿಭಾಗ 8(1)ರಲ್ಲಿ ವಿನಾಯಿತಿ ಪಡೆದಿದೆ) ಪಡೆಯ ಬಹುದಾದ ಮಾಹಿತಿಗಳು

- ಶಿಕ್ಷಕರ ಹಾಜರಾತಿ
- ವಿದ್ಯಾರ್ಥಿಗಳ ಹಾಜರಾತಿ
- ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ (ದಿನಪಾಠ)
- ನೊಂದಣಿ ಮತ್ತು ಶಾಲೆ ಬಿಟ್ಟವರ ಸಂಖ್ಯೆ,
- ವಾರ್ಷಿಕ ಶಾಲೆಯ ಫಲಿತಾಂಶ
- ಬಿಸಿಯೂಟದ ಕಾರ್ಯಕ್ರಮದ ಅನುಷ್ಠಾನ
- ಶಾಲೆಯ ಮೂಲಭೂತ ಸೌಕರ್ಯಗಳ ಗುಣಮಟ್ಟ(ಕೊಠಡಿ, ಕಪ್ಪು ಹಲಗೆ, ಶಿಕ್ಷಣದ ವಸ್ತುಗಳು, ಸಾಮಗ್ರಿಗಳು, ಶೌಚಾಲಯ- ಸಾಮಾನ್ಯ ಮತ್ತು ಹೆಣ್ಣು ಮಕ್ಕಳಿಗೆ)

ಭೂದಾಖಲೆಗಳು

- ಭೂ ವಾರಸುದಾರಿಗೆ( ಖಾಸಗಿ ಮಾಲಿಕತ್ವ)
- ಸಂಸ್ಥೆಗಳಿಗೆ ನೀಡಲಾದ ಭೂಮಿ
- ಸರಕಾರಿ/ಸಂಸ್ಥೆ/ ದೇವಸ್ಥಾನ/ಇಲಾಖೆಗಳ ಭೂಮಿಗಳ ವಿವರ
- ಕೃಷಿ ಭೂಮಿಯ ದಾಖಲೆಗಳು
- ಅರಣ್ಯ ಭೂಮಿಯ ದಾಖಲೆಗಳು.
- ಸಾರ್ವಜನಿಕ ಭೂಮಿಗಳು,
- ಅತಿಕ್ರಮ ವ್ಯಕ್ತಿ ಮತ್ತು ಭೂಮಿಗಳ ವಿವರ
- ಸಮುದಾಯಗಳ ಪುನರವಸತಿ ಮತ್ತು ಬಾದಿತರಿಗಾಗಿ ವಶಪಡಿಸಿಕೊಂಡಿರುವ ಭೂ ವಿವರ.
- ದುರ್ಬಲ ವರ್ಗಗಳ ಅಭಿವೃದ್ದಿಗೆ ಮೀಸಲು ಇಟ್ಟ ಭೂಮಿ ಮತ್ತು ಉಪಯೋಗಗಳು

ಪರಿಸರ ಕಾಪಾಡುವಿಕೆ.

- ಅರಣ್ಯ ನೈಸರ್ಗಿಕ ಸಂಪನ್ಮೂಲಗಳು ಮತ್ತು ಅಪಾಯದ ಹಂಚಿನಲ್ಲಿರುವ ಪ್ರಭೇದಗಳ ವಿವರ
- ಪರಿಸರ ಮಾಲಿನ್ಯದ ಹಂತಗಳು.
- ಸಾರ್ವಜನಿಕ ಭದ್ರತೆಯ ದಾಖಲೆಗಳು ಮತ್ತು ಮಾಲಿನ್ಯದ ಅಪಾಯಕಾರಿ ಹಂತಗಳು.

- ಪರಿಸರ ಸೂಕ್ಷ್ಮತೆಯ ಮೇಲೆ ಅಗಾದ ಪರಿಣಾಮ ಬೀರುವ ಕೈಗಾರಿಕಾ ಘಟಕ ಮತ್ತು ವಾಣಿಜ್ಯೋದ್ಯಮಗಳ ಪರಿಶೀಲನೆ.
- ಪರಿಸರ

ಸಾರ್ವಜನಿಕ ಕಾಮಗಾರಿಗಳು.

- ನಿರ್ಮಾಣ ಪ್ರಕ್ರಿಯೆಗಳು.
- ಕೆಲಸ ಕೈಗೆತ್ತಿಕೊಳ್ಳುಮ ನಿರ್ಣಯಕ್ಕೆ ಆಧಾರಗಳು.
- ಕೆಲಸದ ಮೇಲುಸ್ತುವಾರಿ ಮತ್ತು ಪೂರ್ಣಗೊಳಿಸುವಿಕೆಯ ಒಪ್ಪಂದಗಳು.
- ಕೆಲಸದ ಹಂತ
- ಕೆಲಸದ ತಪಾಸಣೆ
- ಕೆಲಸ ಮಾಡುವಾಗ ಬಳಸಿದ ವಸ್ತುಗಳ ಮಾದರಿ.
- ಕೆಲಸದ ಹೆಸರು
- ಕೆಲಸದ ಆದೇಶದ ಸಂಖ್ಯೆ
- ಸಂಪೂರ್ಣಗೊಂಡ ದಿನಾಂಕ
- ಕೆಲಸ ಆರಂಭಗೊಂಡ ದಿನಾಂಕ
- ಕೆಲಸಕ್ಕೆ ನಿಗದಿಪಡಿಸಿದ ಮೊಬಲಗು
- ನೀಡಲ್ಪಟ್ಟ ಹಣ
- ಈ ತನಕ ನೀಡಿದ ಹಣ
- ಖಾತೆಯ ವಿವರ
- ಪ್ರತಿ ಕೆಲಸದ ಕ್ರಿಯಾ ಯೋಜನೆ ಪ್ರತಿ ಮತ್ತು ಅಂದಾಜು ಪ್ರತಿ.
- ವಿನ್ಯಾಸ ಗುಣ ಮಾಪಕಗಳು/ನಕ್ಷೆಗಳು
- ಅಳತೆ ಪುಸ್ತಕ, ದಾಖಲೆ ನೊಂದಣಿ ಮತ್ತು ಹೆಚ್ಚುವರಿ ನೊಂದಣಿ ಒಳಗೊಂಡಂತೆ
- ಅಳತೆ ತಪಾಸಣೆ ಪತ್ರಗಳು
- ಗುಣಮಟ್ಟ ನಿಯಂತ್ರಣ/ಮೂರನೇ ವ್ಯಕ್ತಿ ಪರಿಶೀಲನೆ ವರದಿಗಳು.

ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯ ಶಾಸಕರು ಮತ್ತು ಸಂಸದರ ನಿಧಿ ಬಳಕೆ

ಒಂದು ವರ್ಷವಾರು ಶಾಸಕರು/ಸಂಸದ ಕ್ಷೇತ್ರಾಭಿವೃದ್ದಿ ನಿಧಿಯ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು

- ಕೆಲಸದ ಹೆಸರು
- ಕೆಲಸದ ಸಾಕ್ಷಿಪ್ತಾ ಮಾಹಿತಿ
- ನಿಗದಿಪಡಿಸಿದ ಮೊತ್ತ
- ಸಂಸ್ಥೆಯ ಹೆಸರು

- **ಅನುಮತಿ ದಿನಾಂಕ**
- **ಕೆಲಸದ ಆದೇಶ ನೀಡಿದ  ದಿನಾಂಕ**
- **ಕೆಲಸ ಪ್ರಾರಂಭಿಸಿದ ದಿನಾಂಕ**
- **ಸಂಪೂರ್ಣಗೊಂಡ ದಿನಾಂಕ**
- **ಕೆಲಸ ನೀಡಲ್ಪಟ್ಟ ದರಪಟ್ಟಿ**
- **ಪಾವತಿಸಿದ ಹಣ ಇತ್ಯಾದಿ**

1)ಪ್ರಸಕ್ತ ವರ್ಷದಲ್ಲಿ ನೀಡಲ್ಪಟ್ಟ ಮೊತ್ತವೆಷ್ಟು?  ಕಳೆದ ವರುಷ ಬಾಕಿ ಉಳಿದ ಮೊತ್ತವೆಷ್ಟು?

2)ಈಗಾಗಲೇ ಅನುಮೋದನೆ ನೀಡಲಾಗಿರುವ ಯೋಜನೆಗಳ ಒಟ್ಟು ಮೊತ್ತವೆಷ್ಟು?

3) ಅನುಮೋದನೆಗಾಗಿ ಕಾಯುತ್ತಿರುವ ಕೆಲಸಗಳು ಮತ್ತು ಅವುಗಳ ಮೊತ್ತವೆಷ್ಟು?

4) ಶಾಸಕರು/ಸಂಸದರ ಖಾತೆಯಲ್ಲಿ ಇನ್ನು ಎಷ್ಟು ಮೊತ್ತ ಉಳಿದಿದೆ?

**ಪಾತ್ರ: ಭ್ರಷ್ಟಾಚಾರದಂಥ ವಿಷಯಗಳ ಬಯಲಿಗೆ ಪ್ರಾಮುಖ್ಯತೆ**

- ಭ್ರಷ್ಟಾಚಾರದ ವಿರುದ್ದ ಬಂದಿರುವ ಅಹವಾಲುಗಳ ವಿವರ, ಅವುಗಳ ಮೇಲಿರುವ ಆರೋಪಗಳ ರೀತಿಗೆ ವಿಭಾಗಗಳ  ಪ್ರಕಾರ ಇರುವ ವಿನಾಯಿತಿ.
- ವಿಚಾರಣೆ ಮಾಡದೆ ಮುಚ್ಚಿದ ಅಹವಾಲುಗಳ ಪಟ್ಟಿ ಮತ್ತು ಕಾರಣವೇನು
- ವಿಚಾರಣೆ ಮಾಡಿ ಮುಚ್ಚಿದ ಪಟ್ಟಿ, ವಿಚಾರಣಾ ವರದಿಗಳ ಪಟ್ಟಿಗಳು, ಯಾವ ಆಧಾರದಲ್ಲಿ ಅಹವಾಲುಗಳನ್ನು ಮುಚ್ಚಲಾಗಿದೆ.
- ದಂಡಕೇಯನ್ನು ಪ್ರಾರಂಭಿಸಿದ ಮತ್ತು ದಂಡ ಪ್ರಕ್ರಿಯೆ ಪ್ರಾರಂಭಿಸಿದ ವಿವರಗಳು.
- ಕ್ರಿಮಿನಲ್ ಅಹವಾಲು ನೀಡಲಾದ ಕೇಸುಗಳು ಮತ್ತು ಅವುಗಳ ಹಂತಗಳು
- ಪೂರ್ಣ ವಿಚಾರಣೆಗೆ ವಿಳಂಬಿಸಲಾಗಿರುವ ಮತ್ತು ಕಾಲಮಿತಿ ನಿಗದಿಪಡಿಸಿರುವ ಕೇಸುಗಳೆಷ್ಟು?

**ಪಾತ್ರ: ಸಾರ್ವಜನಿಕ ಹಿತಾಸಕ್ತಿಗೆ ಪ್ರಾಮುಖ್ಯತೆ ನೀಡುವುದು.**

- ಹಿತಾಸಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು.
- ಪ್ರತಿ ಹಿತಾಸಕ್ತಿಗಳ ಪರಿಹಾರಕ್ಕೆ ನಿಯಮಾವಳಿ/ನಾಗರೀಕ ಬೇಡಿಕೆ ಆಧಾರದಲ್ಲಿ ಕಾಲಮಿತಿ ನಿಗದಿ ಪಡಿಸುವುದು.
- ಈ ಕಾಲಮಿತಿ ಗಳಿಗೆ ಸರಿಯಾಗಿ ಅಧಿಕಾರಿಗಳ ಸ್ಪಂದಿಸದಿದ್ದಲ್ಲಿ ಅವರ ವಿರುದ್ದ ಕ್ರಮಕ್ಕೆ ಒತ್ತಾಹಿಸುವುದು.
- ಪ್ರತಿ ಹಿತಾಸಕ್ತಿಗಳ ಪರಿಹಾರ ವಿಳಂಬಕ್ಕೆ ಕಾರಣಗಳನ್ನು ಪಡೆಯುವುದು.

**ಪಾತ್ರ: ನಾಗರೀಕ ಮತ್ತು ಕಾರ್ಯಕರ್ತರು ಆರ್‌ಟಿಐ ಅನುಷ್ಠಾನಕ್ಕೆ ತೆಗೆದುಕೊಂಡ ಕ್ರಮಗಳ ವಿಶಿಷ್ಟತೆಗಳನ್ನು ಗುರುತಿಸಿ ಬೆಂಬಲಿಸುವುದು.**

- ಸಾರ್ವಜನಿಕ ಅಸಾಮರ್ಥ್ಯ ಮತ್ತು ಭ್ರಷ್ಟಾಚಾರ ಕುರಿತು ಜನರು ಮಾಹಿತಿ ಪಡೆದುಕೊಂಡಿರುವಿಕೆಯ ವರದಿಗಳನ್ನು ಪ್ರಕಟಿಸುವುದು.
- ಮಾಹಿತಿ ಆಯೋಗದಿಂದ ನಿರ್ಣಯಗಳನ್ನು ಪಡೆದು ಯಶೋಗಾಥೆಗಳ ಪ್ರಕಟಣೆ
- ಸಾಮಾನ್ಯ ಮಾಹಿತಿ ಆಯೋಗದಿಂದ ಸುಳ್ಳು ಮಾಹಿತಿ ಪಡೆದ ಸಂದರ್ಭಗಳ ಪ್ರಕಟಣೆ
- ನಿರ್ದಿಷ್ಟ ನಿರ್ಣಯಗಳನ್ನು ಆಯೋಗದಿಂದ ಪಡೆದ ವರದಿಗಳ ಪ್ರಕಟಣೆ.
- ಮಾಹಿತಿ ಹಕ್ಕು ಕಾಯ್ದೆಯನ್ನು ಪ್ರೋತ್ಸಾಹಿಸುವ ಸಂಸ್ಥೆಗಳ ವಿವರ ಪ್ರಕಟಣೆ
- ಮಾಹಿತಿ ಆಯೋಗದ ಅಧಿಕಾರಿ, ಪ್ರಮುಖ ವ್ಯಕ್ತಿಗಳು ಮತ್ತು ಕಾರ್ಯಕರ್ತ ವ್ಯಕ್ತಿ ಪರಿಚಯಗಳ ಪ್ರಕಟಣೆ
- ಮಾಹಿತಿ ಹಕ್ಕಿನ ಸಾಮಾನ್ಯ ವರದಿಗಳು
- ಸಮುದಾಯ ಸಂಘಟನೆ ಮತ್ತು ಸಮುದಾಯ ಆಧಾರಿತ ಸಂಘಟನೆಗಳ ಉತ್ತಮ ಪ್ರಯತ್ನಗಳು
- ಸಂಪಾದಕೀಯ
- ಸಾಮಾಜಿಕ ತಪಾಸಣೆಯ ಅಧ್ಯಾಯನಗಳು
- ಇತರೆ ಸಲಹೆ ನೀಡಬಹುದಾದ ವಿಭಾಗಗಳು.
- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
- ಸಾರ್ವಜನಿಕ ವಿತರಣಾ ವ್ಯವಸ್ಥೆ( ಪಿಡಿಎಸ್)
- ಸಮಗ್ರ ಶಿಶು ಅಭಿವೃದ್ಧಿ ಯೋಜನೆ( ಐಸಿಡಿಎಸ್)
- ನಿರ್ದಿಷ್ಟ ಪ್ರದೇಶದಲ್ಲಿ ಶೌಚಾಲಯ, ಚರಂಡಿ ವ್ಯವಸ್ಥೆ
- ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆ
- ಸರಕಾರವು ಭ್ರಷ್ಟಾಚಾರ ಪ್ರಕರಣಗಳನ್ನು ನಿರ್ವಹಿಸುವ ರೀತಿಗಳು
- ಸರಕಾರಗಳಿಂದ ಸಾರ್ವಜನಿಕ ಹಿತಾಸಕ್ತಿಯ ನಿರ್ವಹಣೆ.